ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು, ಬೆಂಗಳೂರು ವಿಭಾಗ,
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸನಿ1ಚಿ.ವಿ.ಪ/ಪ್ರ.ಪ-1/2011-12. ದಿನಾಂಕ: 09/08/2011

**ಸುತ್ತೋಲೆ.**

ವಿಷಯ:-2011-12ನೇ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ವಿಭಾಗದ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಚಿತ್ರಕಲಾ ಶಿಕ್ಷಕರ ಪ್ರಗತಿ ಪರಿಶೀಲನಾ ಕಾರ್ಯ ನಡೆಸಲು ಅನುಮತಿ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಭಾಗೀಯ ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು ಶೈಕ್ಷಣಿಕ ವರ್ಷದ ತಾತ್ಕಾಲಿಕ ಪ್ರವಾಸದೊಂದಿಗೆ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಚಿತ್ರಕಲಾ ಶಿಕ್ಷಕರ ಪ್ರಗತಿ ಪರಿಶೀಲನಾ ಕಾರ್ಯ ನಡೆಸಿ ಶಿಕ್ಷಕರಿಗೆ ಮಾರ್ಗದಶನ ನೀಡಲು ಅನುಮತಿ ನೀಡಿದೆ.

ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲ್ಗೊಂಡ ಚಿತ್ರಕಲಾ ಶಿಕ್ಷಕರಿಗೆ ಅಂದು **ಅನ್ಯ ಕಾರ್ಯ ನಿಮಿತ್ತ** ಎಂದು ಪರಿಗಣಿಸಲು ತಿಳಿಸಿದೆ.

ಸಂಬಂಧಿಸಿದ ಅಧಿಕಾರಿಗಳು (ಸಮಯಕ್ಕೆ ಸರಿಯಾಗಿ) ಸಕಾಲಕ್ಕೆ ಸಂಬಂಧಿಸಿದ ಶಿಕ್ಷಕರನ್ನು ಬಿಡುಗಡೆಗೊಳಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವಂತೆ ತಿಳಿಸಿದೆ.

(ಎಸ್.ಎಲ್.ಚವ್ಹಾಣ್)
ಸಹನಿರ್ದೇಶಕರು-1
ಬೆಂಗಳೂರು ವಿಭಾಗ, ಬೆಂಗಳೂರು.
11/8/2011

ಪ್ರತಿಗಳು:-

01. ಉಪನಿರ್ದೇಶಕರು (ಆಡಳಿತ)
02. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
03. ಪ್ರಾಂಶುಪಾಲರು, ಶಿಕ್ಷಕರ ತರಬೇತಿ ಸಂಸ್ಥೆ
04. ಕ್ಷೇತ್ರ ಶಿಕ್ಷಣಾಧಿಕಾರಿಗಳು,
05. ಶ್ರೀ.ಮಹಂತೇಶ್.ಅ ಕಂಠಿ, ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು,ಬೆಂಗಳೂರು ವಿಭಾಗ
06. ಪ್ರೌಢಶಾಲಾ/ಪ್ರಾಥಮಿಕ ಶಾಲಾ ಮುಖ್ಯೋಪಾದ್ಯಾಯರು
07. ಕಛೇರಿ ಪ್ರತಿ.

ಗೆ,

ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ------------------ಜಿಲ್ಲೆ/ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆ ದಿನಾಂಕ---------- ರಂದು ನಡೆಯಲಿದ್ದು, 10-00 ಗಂಟೆಗೆ ತಪ್ಪದೆ ಹಾಜರಾಗುವಂತೆ ತಿಳಿಸಿದೆ. ಹಾಜರಾಗುವ ಚಿತ್ರಕಲಾ ಶಿಕ್ಷಕರು 2011-12ನೇ ಸಾಲಿನ (1)ವಾರ್ಷಿಕ ಪಾಠಯೋಜನೆ(2)ಪಾಠ ಟಿಪ್ಪಣಿ, (3) ವೈಯಕ್ತಿಕ ಅಂಕ ನಿರ್ವಹಣಾ ವಹಿ, (4) ಚಿತ್ರಕಲಾ ಶುಲ್ಕದ ಶೇ.20 ಹಣವನ್ನು ಆಯುಕ್ತರ ಕಛೇರಿಗೆ ಸಲ್ಲಿಸಿದ ವಿವರ (5) ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಹಾಜರುಪಡಿಸಿದ ಮಕ್ಕಳ ಸಂಖ್ಯೆಯ ವಿವರಗಳನ್ನು ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿದ ಮಾಹಿತಿಗಳನ್ನು ತರುವುದು. ಹಾಗೂ ತಮ್ಮ ಶಾಲಾ ಮಕ್ಕಳ ಅತ್ಯುತ್ತಮ ಐದು ಕಲಾಕೃತಿಗಳನ್ನು ತಂದು ಪ್ರದರ್ಶಿಸಲು ತಿಳಿಸಿದೆ.

**(ಮಹಂತೇಶ್.ಅ ಕಂಠಿ)**
ವಿಭಾಗೀಯ ಹಿರಿಯ ಚಿತ್ರಕಲಾ
ವಿಷಯ ಪರಿವೀಕ್ಷಕರು

ಉಪನಿರ್ದೇಶಕರು (ಆಡಳಿತ)/ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ

ಮಾಹಿತಿಗಾಗಿ

ಮಾನ್ಯರೇ,

ತಮ್ಮ ವ್ಯಾಪ್ತಿಯಲ್ಲಿ ಬರುವ ಚಿತ್ರಕಲಾ ಶಿಕ್ಷಕರಿರುವ ಶಾಲೆಗಳಿಗೆ ಮೇಲ್ಕಂಡ ಮಾಹಿತಿ ಯೊಂದಿಗೆ ಕಡ್ಡಾಯವಾಗಿ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗುವಂತೆ ಮಾಹಿತಿ ರವಾನಿಸ ಬೇಕೆಂದು ಕೋರಿದೆ.

**ತಮ್ಮ ನಂಬುಗೆಯ,**

**(ಮಹಂತೇಶ್.ಅ ಕಂಠಿ)**
ವಿಭಾಗೀಯ ಹಿರಿಯ ಚಿತ್ರಕಲಾ
ವಿಷಯ ಪರಿವೀಕ್ಷಕರು